# ಅಧ್ಯಾಯ–IV
# ಖನಿಜಗಳ ಸ್ವೀಕೃತಿಗಳು

## 4.1 ತೆರಿಗೆ ನಿರ್ವಹಣೆ

ಖನಿಜ ಸಂಪನ್ಮೂಲಗಳ ನಿರ್ವಹಣೆಗಾಗಿ ಜವಾಬ್ದಾರಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು[60] ಹಂಚಿಕೊಂಡಿರುತ್ತವೆ. ಕೇಂದ್ರ ಸರ್ಕಾರವು ಕಾನೂನಿನ ಮೂಲಕ ಜಾರಿಗೊಳಿಸಿರುವಂತಹ ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957 ಗಣಿಗಳು ಮತ್ತು ಖನಿಜಗಳ[61] ಅಭಿವೃದ್ಧಿಯನ್ನು ನಿಯಂತ್ರಿಸುವ ಸಲುವಾಗಿ ಕಾನೂನಿನ ಚೌಕಟ್ಟನ್ನು ನಿರ್ದಿಷ್ಟಪಡಿಸಿರುವುದು. ಖನಿಜ ರಿಯಾಯಿತಿ ನಿಯಮಗಳು, 1960, ಖನಿಜ ಸಂರಕ್ಷಣೆ ಮತ್ತು ಅಭಿವೃದ್ಧಿ ನಿಯಮಗಳು, 1988 ಹಾಗೂ ಗ್ರಾನೈಟು ಸಂರಕ್ಷಣೆ ಮತ್ತು ಅಭಿವೃದ್ಧಿ ನಿಯಮಗಳು, 1999, ಇವುಗಳನ್ನು ಖನಿಜಗಳ ಸಂರಕ್ಷಣೆ ಹಾಗೂ ವ್ಯವಸ್ಥಿತ ಅಭಿವೃದ್ಧಿ ಹಾಗೂ ಪರ್ಮಿಟ್ಟುಗಳು, ಪರವಾನಿಗಳು ಹಾಗೂ ಗುತ್ತಿಗೆಗಳ ನೀಡಿಕೆಯನ್ನು ನಿಯಂತ್ರಿಸುವ ಸಲುವಾಗಿ ರೂಪಿಸಲಾಗಿರುವುದು.

ಅಪ್ರಧಾನ ಖನಿಜಗಳನ್ನು ಹೊರತೆಗೆಯುವ ಸಲುವಾಗಿ ಕಾಯಿದೆ–ಕಾನೂನುಗಳನ್ನು ರೂಪಿಸುವುದಕ್ಕಾಗಿ ರಾಜ್ಯಗಳಿಗೆ ಅಧಿಕಾರವನ್ನು ನೀಡಲಾಗಿದೆ. ಅದರಂತೆಯೇ ಕರ್ನಾಟಕ ಅಪ್ರಧಾನ ಖನಿಜ ರಿಯಾಯಿತಿ ನಿಯಮಗಳು, 1994ನ್ನು ರಾಜ್ಯ ಸರ್ಕಾರವು ರೂಪಿಸಿರುವುದು.

## 4.2 ಆಂತರಿಕ ಲೆಕ್ಕಪರಿಶೋಧನೆ

ಗಣಿಗಳು ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗವು 1985ರಿಂದಲೂ ಕಾರ್ಯನಿರ್ವಹಿಸುತ್ತಿರುವುದು. ಅದು ರಾಜ್ಯ ಲೆಕ್ಕಪತ್ರಗಳ ಇಲಾಖೆಯಿಂದ ನಿಯೋಜನೆಯ ಆಧಾರದ ಮೇರೆಗೆ ಕಾರ್ಯನಿರ್ವಹಿಸುವ ಓರ್ವ ಲೆಕ್ಕಾಧಿಕಾರಿಯವರ ನೇತೃತ್ವದಲ್ಲಿದ್ದು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರ ಒಟ್ಟಾರೆ ನಿಯಂತ್ರಣದಲ್ಲಿರುವುದು.

ಇಲಾಖೆಯು ಒದಗಿಸಿದ ಮಾಹಿತಿಯಂತೆ, ಆಂತರಿಕ ಲೆಕ್ಕಪರಿಶೋಧನಾ ವಿಭಾಗದಲ್ಲಿ ಸಿಬ್ಬಂದಿಯ ಕೊರತೆಯ ಕಾರಣ 2015–16ರಿಂದಲೂ ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸಿರುವುದಿಲ್ಲ. ಇಲಾಖೆಯು ಒದಗಿಸಿರುವ ಮಾಹಿತಿಯಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳ ಸಂಖ್ಯೆ, ಇತ್ಯರ್ಥಗೊಂಡಿರುವುದು ಮತ್ತು ತೆರಿಗೆ ಬಾಧ್ಯತೆಯೊಂದಿಗೆ ಬಾಕಿಯಿರುವ ಅಂಶಗಳ ವರ್ಷವಾರು ವಿವರಗಳನ್ನು **ಕೋಷ್ಟಕ** 4.1ರಲ್ಲಿ ನೀಡಲಾಗಿದೆ:

**ಕೋಷ್ಟಕ 4.1**

**ಆಂತರಿಕ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳ ವರ್ಷವಾರು ವಿವರಗಳು**

(₹ **ಕೋಟಿಯಲ್ಲಿ**)

| ವರ್ಷ | ಗಮನಿಸಲಾದ ಅಂಶಗಳು | | ಇತ್ಯರ್ಥಗೊಂಡಿರುವ ಅಂಶಗಳು | | ಬಾಕಿಯಿರುವ ಅಂಶಗಳು | |
|---|---|---|---|---|---|---|
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| ವರೆಗೆ 2014-15 | 334 | 117.48 | - | - | 334 | 117.48 |
| 2015-16 | - | - | - | - | - | - |
| 2016-17 | - | - | - | - | - | - |
| 2017-18 | - | - | - | - | - | - |
| 2018-19 | | | | | | |

60 ಭಾರತದ ಸಂವಿಧಾನದ ಏಳನೇ ಷೆಡ್ಯೂಲಿನ ಕೇಂದ್ರ ಪಟ್ಟಿಯ (ಪಟ್ಟಿ I) ನಮೂದು ಸಂಖ್ಯೆ 54 ಹಾಗೂ ರಾಜ್ಯ ಪಟ್ಟಿಯ (ಪಟ್ಟಿ II) ನಮೂದು ಸಂಖ್ಯೆ 23 ಮತ್ತು 50.

61 ಪೆಟ್ರೋಲಿಯಂ ಮತ್ತು ಪ್ರಾಕೃತಿಕ ಅನಿಲ ಮತ್ತು ಪರಮಾಣು ಖನಿಜಗಳನ್ನು ಹೊರತುಪಡಿಸಿ.

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ಇಲಾಖೆಯಲ್ಲಿ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಆಂತರಿಕ ಲೆಕ್ಕಪರಿಶೋಧನೆಯ ಚಟುವಟಿಕೆಗಳು ನಡೆದಿರಲಿಲ್ಲ. 2014–15 ಸಾಲಿನ ಅಂತ್ಯದಲ್ಲಿ ₹ 117.48 ಕೋಟಿ ಮೊತ್ತವು ಒಳಗೊಂಡಂತೆ 334 ಪ್ರಕರಣಗಳು ಬಾಕಿಯಿದ್ದವು, ಅವುಗಳ ಪೈಕಿ ಕಳೆದ ಐದು ವರ್ಷಗಳಲ್ಲಿ ಯಾವುದೇ ಪ್ರಕರಣಗಳನ್ನು ಇತ್ಯರ್ಥಗೊಳಿಸಿರುವುದಿಲ್ಲ. ಇದು, ಇಲಾಖೆಯು ಆಂತರಿಕ ಲೆಕ್ಕಪರಿಶೀಲನೆಗೆ ಅರ್ಹ/ತಕ್ಕುದಾದ ರೀತಿಯಲ್ಲಿ ಪ್ರಾಮುಖ್ಯತೆಯನ್ನು ನೀಡುತ್ತಿರುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಆಂತರಿಕ ಲೆಕ್ಕಪರಿಶೋಧನೆಯು ತಪ್ಪುಗಳನ್ನು ಸ್ಪಷ್ಟಪಡಿಸುವ ಮತ್ತು ಸಮಯವು ಕಳೆದುಹೋಗದೆಯೇ ಪರಿಹಾರಗಳನ್ನು ಖಚಿತಪಡಿಸಿಕೊಳ್ಳುವ ಮೂಲಕ ನಿರೋಧಕ ಮತ್ತು ಸುಧಾರಣಾ ಪರಿಣಾಮಗಳನ್ನು ಹೊಂದಿರಬೇಕು ಹಾಗೂ ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸದಿರುವುದು ಇಲಾಖೆಯನ್ನು ನಿಯಂತ್ರಣ ವಿಫಲತೆಗಳ ಸಂಭಾವ್ಯ ಅಪಾಯಗಳಿಗೆ ಮುಕ್ತವಾಗಿರಿಸುತ್ತದೆ.

## 4.3 ಲೆಕ್ಕಪರಿಶೋಧನೆಯ ಫಲಿತಾಂಶಗಳು

ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಲೆಕ್ಕಪರಿಶೋಧನೆ ಮಾಡಬೇಕಾದಂತಹ 34 ಘಟಕಗಳು/ಕಚೇರಿಗಳು ಇರುತ್ತವೆ. ಇವುಗಳ ಪೈಕಿ, 1876 ಗುತ್ತಿಗೆಗಳು ಇದ್ದಂತಹ 19 ಘಟಕಗಳು/ಕಚೇರಿಗಳನ್ನು ಲೆಕ್ಕಪರಿಶೋಧನೆಯು ಪರೀಕ್ಷಾ–ಪರಿಶೀಲನೆಗಾಗಿ ಆಯ್ಕೆ ಮಾಡಿಕೊಂಡಿತು. ಲೆಕ್ಕಪರಿಶೋಧನೆಯು 2018–19 ಸಾಲಿನಲ್ಲಿ ಎಲ್ಲಾ 1876 ಗುತ್ತಿಗೆಗಳನ್ನು (ಶೇಕಡಾ 100) ಪರಿಶೀಲಿಸಿತು ಹಾಗೂ ₹ 217.05 ಕೋಟಿ ಮೊತ್ತವು ಒಳಗೊಂಡಂತೆ ಕಾರ್ಯನಿರ್ವಹಣಾ ಖಾತರಿಗಳನ್ನು (ಪರ್ಫಾರ್ಮೆನ್ಸ್ ಗ್ಯಾರೆಂಟಿ) ಮತ್ತು ಹಣಕಾಸು ಭರವಸೆಗಳನ್ನು (ಫೈನಾನ್ಸಿಯಲ್ ಅಸ್ಯೂರೆನ್ಸ್) ಪಡೆದುಕೊಳ್ಳದಿದ್ದಂತಹ, ಅಧಿನಿಯಮಗಳು/ನಿಯಮಗಳ ಅನುವುಗಳನ್ನು ಅನುಸರಿಸದಿದ್ದಂತಹ 1015 ಪ್ರಕರಣಗಳನ್ನು (ಲೆಕ್ಕಪರಿಶೋಧನೆಗೆ ಆಯ್ಕೆಯಾದವುಗಳ ಪೈಕಿ ಶೇಕಡಾ 54.10) 16 ಘಟಕಗಳಲ್ಲಿ/ಕಚೇರಿಗಳಲ್ಲಿ ಗಮನಿಸಿತು. ಈ ಪ್ರಕರಣಗಳು ದಾಖಲೆಗಳ ಪರೀಕ್ಷಾ–ಪರಿಶೀಲನೆಯ ಆಧಾರದ ಮೇರೆಗೆ ಕೇವಲ ದೃಷ್ಟಾಂತ ಪ್ರಕರಣಗಳಾಗಿರುತ್ತವೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶಗಳು ಈ ಕೆಳಗಿನ **ಕೋಷ್ಟಕ 4.2**ದಲ್ಲಿ ತೋರಿಸಿರುವ ಪ್ರವರ್ಗಗಳ ಅಡಿಯಲ್ಲಿದ್ದವು:

**ಕೋಷ್ಟಕ: 4.2**
**ಲೆಕ್ಕಪರಿಶೋಧನೆಯ ಫಲಿತಾಂಶಗಳು**

(₹. ಕೋಟಿಯಲ್ಲಿ)

| ಕ್ರಮ ಸಂಖ್ಯೆ | ಪ್ರವರ್ಗ | ಕಂಡಿಕೆಗಳ ಸಂಖ್ಯೆ | ಮೊತ್ತ |
|---|---|---|---|
| 1. | ಖನಿಜ ರವಾನೆ ಪರವಾನಿಗೆಗಳನ್ನು ಪಡೆಯದೆಯೇ ಅಪ್ರಧಾನ ಖನಿಜಗಳನ್ನು ಸಾಗಣೆ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು | 9 | 141.83 |
| 2. | ರಾಜಧನವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 9 | 16.65 |
| 3. | ಕಾರ್ಯನಿರ್ವಹಣಾ ಖಾತರಿಗಳನ್ನು (ಪರ್ಫಾರ್ಮೆನ್ಸ್ ಗ್ಯಾರೆಂಟಿ) ಹಾಗೂ ಹಣಕಾಸು ಭರವಸೆಗಳನ್ನು ಪಡೆದುಕೊಳ್ಳದಿದ್ದುದು | 13 | 15.92 |
| 4. | ಇತರೆ ನಿಯಮಬಾಹಿರತೆಗಳು | 19 | 42.65 |
| | **ಒಟ್ಟು** | **50** | **217.05** |

ಪ್ರಸಕ್ತ ಸಾಲಿನಲ್ಲಿ ಇಲಾಖೆಯು ₹ 29.33 ಕೋಟಿ ಮೊತ್ತವು ಒಳಗೊಂಡಂತೆ ಏಳು ಕಂಡಿಕೆಗಳಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿದ್ದುದು ಹಾಗೂ ಇನ್ನಿತರೆ ಲೋಪದೋಷಗಳನ್ನು ಒಪ್ಪಿಕೊಂಡಿದ್ದಿತು. ಈ ಹಿಂದಿನ ಸಾಲುಗಳಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ 12 ಕಂಡಿಕೆಗಳಿಗೆ ಸಂಬಂಧಿಸಿದಂತೆ ₹ 4.77 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದ್ದಿತು.

₹ 7.29 ಕೋಟಿ ಮೊತ್ತವು ಒಳಗೊಂಡಂತೆ ಒಂದೆರಡು ದೃಷ್ಟಾಂತ ಪ್ರಕರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 4.4 ಖನಿಜ ರವಾನೆ ಪರವಾನಿಗೆಗಳನ್ನು ಪಡೆದುಕೊಳ್ಳದೆಯೇ ಸಾಗಾಣಿಕೆ ಮಾಡಿದ್ದಂತಹ ಅಪ್ರಧಾನ ಖನಿಜಗಳ ಮೇಲೆ ರಾಜಧನವನ್ನು ವಿಧಿಸದಿದ್ದುದು

ಅಪ್ರಧಾನ ಖನಿಜಗಳ ಗಣಿಗಾರಿಕೆಯ ಗುತ್ತಿಗೆಯನ್ನು ಅಥವಾ ಪರವಾನಿಗೆಯನ್ನು ಹೊಂದಿರುವವರು ಹೊರತೆಗೆಯಲಾದಂತಹ ಅಥವಾ ಬಳಸಿಕೊಳ್ಳಲಾದಂತಹ ಅಪ್ರಧಾನ ಖನಿಜಗಳ[62] ಮೇಲೆ ನಿಯಮಗಳ ಷೆಡ್ಯೂಲು IIರಲ್ಲಿ ನಿರ್ದಿಷ್ಟಪಡಿಸಿರುವ ದರಗಳಲ್ಲಿ ರಾಜಧನವನ್ನು ಪಾವತಿಸತಕ್ಕದ್ದು ಎಂಬುದಾಗಿ ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ (ಕೆಎಂಎಂಸಿ) ನಿಯಮಗಳು, 1994ರ ನಿಯಮ 36 ನಿರ್ದಿಷ್ಟಪಡಿಸುತ್ತದೆ. ಯಾವುದೇ ವ್ಯಕ್ತಿಯು ಯಾವುದೇ ಅಪ್ರಧಾನ ಖನಿಜವನ್ನು ವಿದ್ಯುನ್ಮಾನೀಯ ನಮೂನೆಯಲ್ಲಿ (ಇ–ಪರವಾನಿಗೆ ಅಥವಾ ಎಂ–ಪರವಾನಿಗೆ) ಒಂದು ಗಣಕೀಕೃತ ಖನಿಜ ರವಾನೆ ಪರವಾನಿಗೆಯೊಂದಿಗೆ (ಎಂಡಿಪಿ) ಹೊರತುಪಡಿಸಿ ಅಥವಾ ಅದರ ಅನುಸಾರವಲ್ಲದೇ ಅನ್ಯಥಾ ರೀತಿಯಲ್ಲಿ ಸಾಗಾಣಿಕೆ ಮಾಡುವಂತಿಲ್ಲ ಅಥವಾ ಸಾಗಾಣಿಕೆ ಮಾಡಲು ಕಾರಣರಾಗುವಂತಿಲ್ಲ ಎಂಬುದಾಗಿ ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳು, 1994ರ ನಿಯಮ 42 (1) ಅಗತ್ಯತೆಯನ್ನು ಹೊಂದಿರುತ್ತದೆ. ಅಲ್ಲದೆಯೇ, ಅಪ್ರಧಾನ ಖನಿಜಗಳ ಗಣಿಗಾರಿಕೆ ಗುತ್ತಿಗೆ ಒಡಂಬಡಿಕೆ ಪತ್ರದ ಭಾಗ– ಗಿರ ಷರತ್ತು–4ರ ಅನುಸಾರ ಗುತ್ತಿಗೆಯನ್ನು ಹೊಂದಿರುವವರು ಖನಿಜ ರವಾನೆ ಪರವಾನಿಗೆಯನ್ನು ಪಡೆಯದೆಯೇ ಅಪ್ರಧಾನ ಖನಿಜಗಳನ್ನು ಸಾಗಣೆ ಮಾಡಿದ್ದಕ್ಕಾಗಿ ರಾಜಧನದ ಐದು ಪಟ್ಟು ದಂಡವನ್ನು ಪಾವತಿಸಲು ಬಾಧ್ಯರಾಗಿರುತ್ತಾರೆ. ಮುಂದುವರೆದು, ಖನಿಜ ರವಾನೆ ಪರವಾನಿಗೆಗಳನ್ನು ಪಡೆದುಕೊಳ್ಳದೆಯೇ ಅಪ್ರಧಾನ ಖನಿಜಗಳ ರವಾನೆ ಮಾಡಿದ್ದಕ್ಕಾಗಿ ರಾಜಧನದ ಐದು ಪಟ್ಟು ದಂಡವನ್ನು ವಿಧಿಸುವಂತೆ ಇಲಾಖೆಯ ಎಲ್ಲಾ ಕಚೇರಿಗಳಿಗೆ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರವರು ಒಂದು ಸುತ್ತೋಲೆಯನ್ನು[63] ನೀಡಿರುವರು (ಮೇ 2016).

ಮೇ 2018ರಲ್ಲಿ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ 16 ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿಗಳ ಕಚೇರಿಗಳ ಪೈಕಿ ಒಂದರಲ್ಲಿ[64] ದಾಖಲೆಗಳನ್ನು ಪರಿಶೀಲಿಸುವ ವೇಳೆಯಲ್ಲಿ, ಅಪ್ರಧಾನ ಖನಿಜಗಳ ಗಣಿಗಾರಿಕೆ ಗುತ್ತಿಗೆಗಳನ್ನು ಹೊಂದಿರುವವರು 2015–16 ಹಾಗೂ 2016–17 ಸಾಲುಗಳಲ್ಲಿ ಖನಿಜ ರವಾನೆ ಪರವಾನಿಗೆಗಳನ್ನು ಪಡೆದುಕೊಳ್ಳದೆಯೇ 10,49,961 ಮೆಟ್ರಿಕ್ ಟನ್ನುಗಳಷ್ಟು ಕಟ್ಟಡ ಕಲ್ಲುಗಳನ್ನು ಸಾಗಣೆ ಮಾಡಿದ್ದರು ಹಾಗೂ ಅದಕ್ಕಾಗಿ ರಾಜಧನದ ಐದು ಪಟ್ಟು ದಂಡವನ್ನು ವಿಧಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ₹ 6.47 ಕೋಟಿ[65] ಮೊತ್ತದಷ್ಟು ರಾಜಧನವನ್ನು ವಿಧಿಸಿರಲಿಲ್ಲ.

ಲೆಕ್ಕಪರಿಶೋಧನೆಯು ಜನವರಿ 2019 ಹಾಗೂ ಅಕ್ಟೋಬರ್ 2019ರ ನಡುವೆ ಈ ಪ್ರಕರಣಗಳನ್ನು ಇಲಾಖೆ ಹಾಗೂ ಸರ್ಕಾರದ ಗಮನಕ್ಕೆ ತಂದನಂತರ, ರಾಜಧನವನ್ನು ಕಾಮಗಾರಿಗಳನ್ನು

[62] ಗಣಿಗಳು ಮತ್ತು ಖನಿಜಗಳ ಅಭಿವೃದ್ಧಿ ಮತ್ತು ನಿಯಂತ್ರಣ ಅಧಿನಿಯಮ, 1957ರ ಪರಿಚ್ಛೇದ 3(ಇ) ಅನುಸಾರ, "ಅಪ್ರಧಾನ ಖನಿಜಗಳು ಎಂದರೆ ಕಟ್ಟಡ ಕಲ್ಲುಗಳು, ಜಲ್ಲಿ, ಸಾಮಾನ್ಯ ಮಣ್ಣು, ನಿರ್ದಿಷ್ಟ ಉದ್ದೇಶಗಳಿಗೆ ಬಳಸದ ಸಾಮಾನ್ಯ ಮರಳು ಹಾಗೂ ಕೇಂದ್ರ ಸರ್ಕಾರವು ಅಧಿಕೃತ ಗೆಜೆಟ್ಟಿನಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ಒಂದು ಅಪ್ರಧಾನ ಖನಿಜ ಎಂಬುದಾಗಿ ಘೋಷಿಸಬಹುದಾದಂತಹ ಇತರೆ ಯಾವುದೇ ಖನಿಜ.

[63] ಸುತ್ತೋಲೆ ಸಂಖ್ಯೆ ಗಣಿಗಳು ಮತು ಭೂವಿಜ್ಞಾನ:ಡಿಸಿಬಿ/ಎಸ್‌ಕ್ಯೂಎಲ್–1/22/ಡಿಸಿಬಿ ವಿಭಾಗ/2016–2017 ದಿನಾಂಕ 3 ಮೇ 2016.

[64] ಉಪ–ನಿರ್ದೇಶಕರು, ಮಂಗಳೂರು.

[65] ಕಟ್ಟಡ ಕಲ್ಲಿಗೆ ರಾಜಧನದ ದರವು ಮೆಟ್ರಿಕ್ ಟನ್ ಒಂದಕ್ಕೆ ₹ 60/–.

ಕಾರ್ಯಗತಗೊಳಿಸುವ ಇಲಾಖೆಗಳು ಗುತ್ತಿಗೆದಾರರುಗಳ ಬಿಲ್ಲುಗಳಿಂದ ಮೂಲದಲ್ಲಿಯೇ ಕಡಿದುಕೊಂಡಿರುತ್ತವೆ ಹಾಗೂ ಅಪ್ರಧಾನ ಖನಿಜಗಳ ಗಣಿಗಳ ಗುತ್ತಿಗೆಯನ್ನು ಹೊಂದಿರುವವರು ಖಾಸಗಿಯವರಿಗೆ ಸರಬರಾಜು ಮಾಡಿದ್ದಲ್ಲಿ, ಇಲಾಖೆಯು ವಾರ್ಷಿಕ ರಾಜಧನ ನಿರ್ಧಾರಣೆಯ ಮೂಲಕ ರಾಜಧನವನ್ನು ವಸೂಲಾತಿ ಮಾಡುತ್ತದೆ ಎಂಬುದಾಗಿ ಇಲಾಖೆಯು ಉತ್ತರಿಸಿತು.

ಈ ಕೆಳಗಿನ ಕಾರಣಗಳಿಂದಾಗಿ ಉತ್ತರವನ್ನು ಒಪ್ಪಿಕೊಳ್ಳಲು ಸಾಧ್ಯವಿರುವುದಿಲ್ಲ:

i. ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳಿಗೆ ಖನಿಜಗಳ ಸರಬರಾಜಿಗೆ ಸಂಬಂಧಿತ ಹೇಳಿಕೆಯ ಬೆಂಬಲವಾಗಿ ದಾಖಲೆಗಳನ್ನು ಒದಗಿಸುವಂತೆ ಕೋರಲಾಗಿದ್ದಿತಾದರೂ (25 ಏಪ್ರಿಲ್ 2019), ಇಲಾಖೆಯು ಅದನ್ನು ಒದಗಿಸಲಿಲ್ಲ.

ii. ಖಾಸಗಿಯವರಿಗೆ ಮಾಡಲಾಗುವ ಸರಬರಾಜಿಗೆ ಸಂಬಂಧಿಸಿದಂತೆ ವಾರ್ಷಿಕ ರಾಜಧನ ನಿರ್ಧಾರಣೆಯ ಮೂಲಕ ರಾಜಧನವನ್ನು ವಿಧಿಸುವುದಕ್ಕೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಗೆ ಯಾವುದೇ ದಾಖಲೆಗಳ ಸಾಕ್ಷ್ಯಾಧಾರಗಳು ಕಂಡುಬರಲಿಲ್ಲ. ಕಂಡಿಕೆಯಲ್ಲಿ ಹೊರತರಲಾಗಿರುವಂತಹ ಎಲ್ಲಾ ಪ್ರಕರಣಗಳಲ್ಲಿಯೂ ಕೇವಲ ದಂಡವನ್ನು ವಿಧಿಸಲಾಗಿರುವುದೇ ಹೊರತು ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳು, 1994ರ ನಿಯಮ 36ರ ಅನುಸಾರ ರಾಜಧನವನ್ನು ವಿಧಿಸಿರಲಿಲ್ಲ.

ಮುಂದುವರೆದು, ಮಾರ್ಚ್ 2017ಕ್ಕೆ ಅಂತ್ಯಗೊಂಡಂತಹ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿನ (ರಾಜಸ್ವ ವಲಯ) ಕಂಡಿಕೆ ಸಂಖ್ಯೆ 5.4.2 ಮೂಲಕ ಲೆಕ್ಕಪರಿಶೋಧನೆಯು ರಾಜ್ಯದಲ್ಲಿ ಕಾನೂನುಬಾಹಿರ/ಅಕ್ರಮ ಅಪ್ರಧಾನ ಖನಿಜಗಳ ಗಣಿಗಾರಿಕೆಯ ಸಂಭಾವ್ಯತೆಗಳನ್ನು ಈಗಾಗಲೇ ಸ್ಪಷ್ಟಪಡಿಸಿರುವುದು, ಈ ಕಂಡಿಕೆಯು ಇಲಾಖೆಯಿಂದ ಮಾಡಲ್ಪಡುವ ಗಣಿಗಾರಿಕೆ ಹೊಂಡಗಳ ಅಳತೆಯಲ್ಲಿನ ಲೋಪದೋಷಗಳನ್ನು ತೋರಿಸಿಕೊಟ್ಟಿರುವುದು; ಅದರದೇ ಆದಂತಹ ಅಪ್ರಧಾನ ಖನಿಜಗಳ ಗಣಿಗಳಲ್ಲಿನ ಹೊಂಡಗಳ ಗಾತ್ರದ ಅಂದಾಜಿನ ಮೂಲಕ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯಿಂದ ರಾಜಧನದ ಸಂಗ್ರಹಣೆಯು ರಾಜಧನದ ಒಟ್ಟಾರೆ ಸಂಗ್ರಹಣೆಯ ಕೇವಲ ಸರಿಸುಮಾರು ಶೇಕಡಾ 25ರಷ್ಟು ಆಗಿರುತ್ತದೆ ಎಂಬುದನ್ನು ಈ ಕಂಡಿಕೆಯು ತೋರಿಸುತ್ತದೆ. ಅಲ್ಲದೆಯೇ, ಲೆಕ್ಕಪರಿಶೋಧನೆಯು **"ಅಪ್ರಧಾನ ಖನಿಜಗಳ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ವ್ಯವಸ್ಥಿತ ಮತ್ತು ವೈಜ್ಞಾನಿಕ ಗಣಿಗಾರಿಕೆ ಮತ್ತು ಪರಿಸರ ಸಂರಕ್ಷಣೆ"**[66]. ಈ ವಿಷಯದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಮೂಲಕ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಬೃಹತ್ ಪ್ರಮಾಣದಲ್ಲಿ ನಡೆಯುತ್ತಿದ್ದಂತಹ ಅಕ್ರಮ/ಕಾನೂನುಬಾಹಿರ ಗಣಿಗಾರಿಕೆಯನ್ನು ಕೂಡ ಸಾಬೀತುಪಡಿಸಿದ್ದಿತು. ಅಂತಹ ಅಕ್ರಮ/ಕಾನೂನುಬಾಹಿರ ಗಣಿಗಾರಿಕೆ ಚಟುವಟಿಕೆಗಳ ದೃಷ್ಟಿಯಿಂದ ಹಾಗೂ ಇಲಾಖೆಯಿಂದ ಮಾಡಲಾಗುತ್ತಿರುವ ಅಪ್ರಧಾನ ಖನಿಜಗಳ ಗಣಿಗಳಲ್ಲಿನ ಹೊಂಡಗಳ ಗಾತ್ರದ ಅಳತೆಯಲ್ಲಿನ ಲೋಪದೋಷಗಳ ದೃಷ್ಟಿಯಿಂದ, ಹೊರ ತೆಗೆಯಲಾದಂತಹ ಖನಿಜಗಳನ್ನು ಹೊಂಡಗಳ ಗಾತ್ರದ ಅಳತೆಯ ಮೂಲಕ ನಿಖರವಾಗಿ ಅಳೆಯಲಾಗುವುದು ಹಾಗೂ ಇಲಾಖೆಯು ವಿಧಿಸಿರದ ರಾಜಧನವನ್ನು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು ವಿಧಿಸುತ್ತವೆ ಎಂಬುದಾಗಿ ಸಾಧಿಸುವುದು ವಾಸ್ತವಿಕತೆಯಿಂದ ಕೂಡಿರಲಿಲ್ಲ.

**ಶಿಫಾರಸು: ಖನಿಜ ರವಾನೆ ಪರವಾನಿಗೆಗಳನ್ನು ಹೊಂದಿರದೆಯೇ ಹೊರತೆಗೆಯಲಾದಂತಹ ಹಾಗೂ ಸಾಗಣೆ ಮಾಡಲಾದಂತಹ ಖನಿಜಗಳಿಗೆ ಸಂಬಂಧಿಸಿದಂತೆ ಇಲಾಖೆಯು ರಾಜಧನವನ್ನು ಮತ್ತು ದಂಡವನ್ನು ವಿಧಿಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತದೆ.**

---

[66] ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿಗೆ ಲೆಕ್ಕಪರಿಶೋಧನಾ ವರದಿಯ (ರಾಜಸ್ವ ವಲಯ) ಕಂಡಿಕೆಗಳು 4.4.9.5 ಮತ್ತು 4.4.15.

## 4.5 ಕಟ್ಟಡ ಕಲ್ಲುಗಳನ್ನು ಅಕ್ರಮವಾಗಿ/ಕಾನೂನುಬಾಹಿರವಾಗಿ ಹೊರತೆಗೆದಿದ್ದುದು

ಅಪ್ರಧಾನ ಖನಿಜಗಳ ಗಣಿಗಾರಿಕೆಯ ಗುತ್ತಿಗೆಯನ್ನು ಅಥವಾ ಪರವಾನಿಗೆಯನ್ನು ಹೊಂದಿರುವವರು ಹೊರತೆಗೆಯಲಾದಂತಹ ಅಥವಾ ಬಳಸಿಕೊಳ್ಳಲಾದಂತಹ ಅಪ್ರಧಾನ ಖನಿಜಗಳ[67] ಮೇಲೆ ನಿಯಮಗಳ ಷೆಡ್ಯೂಲು IIರಲ್ಲಿ ನಿರ್ದಿಷ್ಟಪಡಿಸಿರುವ ದರಗಳಲ್ಲಿ ರಾಜಧನವನ್ನು ಪಾವತಿಸತಕ್ಕದ್ದು ಎಂಬುದಾಗಿ ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ (ಕೆಎಂಎಂಸಿ) ನಿಯಮಗಳು, 1994ರ ನಿಯಮ 36 ನಿರ್ದಿಷ್ಟಪಡಿಸುತ್ತದೆ.

ಮುಂದುವರೆದು, ಒಂದು ಪರವಾನಿಗೆ ಅಥವಾ ಗುತ್ತಿಗೆಯನ್ನು ಹೊಂದಿರದೆಯೇ ಅಪ್ರಧಾನ ಖನಿಜಗಳ ಗಣಿಗಾರಿಕೆ ಕಾರ್ಯಾಚರಣೆಗಳನ್ನು ಕೈಗೊಳ್ಳುವ ಯಾವುದೇ ವ್ಯಕ್ತಿಯು 11 ಆಗಸ್ಟ್ 2016ರವರೆಗೆ ₹ 5,000/– ಅಥವಾ ಖನಿಜದ ಮೌಲ್ಯ, ಇವೆರಡರಲ್ಲಿ ಯಾವುದು ಅಧಿಕವೋ ಅದನ್ನು ದಂಡವಾಗಿ ಹಾಗೂ 17 ನವಂಬರ್ 2017ರವರೆಗೆ ರಾಜಧನದ 15 ಪಟ್ಟು ಅಲ್ಲಿಂದ ಮುಂದಕ್ಕೆ ರಾಜಧನದ ಐದು ಪಟ್ಟು ದಂಡವನ್ನು ಪಾವತಿಸಲು ಬಾಧ್ಯರಾಗಿರುತ್ತಾರೆ ಎಂಬುದಾಗಿ ಕರ್ನಾಟಕ ಅಪ್ರಧಾನ ಖನಿಜಗಳ ನಿಯಮಗಳು, 1994ರ ನಿಯಮ 44(3) ನಿರ್ದಿಷ್ಟಪಡಿಸಿರುತ್ತದೆ.

ಲೆಕ್ಕಪರಿಶೋಧನೆಯು ಬಳ್ಳಾರಿಯ ಹಿರಿಯ ಭೂವಿಜ್ಞಾನಿಯವರ ಕಚೇರಿಯ ಆಡಳಿತ ವ್ಯಾಪ್ತಿಯಲ್ಲಿದ್ದಂತಹ ಎರಡು[68] ತಾಲ್ಲೂಕುಗಳಲ್ಲಿ ಭೂವಿಜ್ಞಾನಿಯವರು ಹಾಗೂ ಇಂಜಿನಿಯರ್‌ರವರ ಜೊತೆಯಲ್ಲಿ 20 ಕಟ್ಟಡ ಕಲ್ಲುಗಳ ಗಣಿಗಳನ್ನು[69] ಜಂಟಿ ಪರೀಕ್ಷಣೆಯನ್ನು ನಡೆಸಿತು[70] (ಡಿಸೆಂಬರ್ 2018). ಪರೀಕ್ಷಣೆಯ ವೇಳೆಯಲ್ಲಿ, ಆರು ಪ್ರದೇಶಗಳಿಂದ 22,904 ಮೆಟ್ರಿಕ್ ಟನ್ನುಗಳಷ್ಟು ಕಟ್ಟಡ ಕಲ್ಲುಗಳನ್ನು ಹೊರತೆಗೆದಿರುವುದನ್ನು ಗಮನಿಸಿತು, ಅವುಗಳ ಪೈಕಿ ಗುತ್ತಿಗೆಯ ಅಡಿಯಲ್ಲಿದ್ದಂತಹ ನಾಲ್ಕು ಗಣಿಗಳ ಗುತ್ತಿಗೆಯ ಅವಧಿಯು ಮುಕ್ತಾಯಗೊಂಡಿದ್ದಿತು ಅಥವಾ ಅವುಗಳನ್ನು ರದ್ದುಗೊಳಿಸಲಾಗಿದ್ದಿತು ಹಾಗೂ ಎರಡು ಪ್ರದೇಶಗಳಿಗೆ ಸಂಬಂಧಿಸಿದಂತೆ ಯಾವುದೇ ಅಪ್ರಧಾನ ಖನಿಜಗಳ ಗಣಿಗಾರಿಕೆ ಗುತ್ತಿಗೆ/ಪರವಾನಿಗೆಯನ್ನೂ ನೀಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅವಧಿಯು ಮುಕ್ತಾಯಗೊಂಡಿರುವಂತಹ/ರದ್ದುಗೊಳಿಸಿರುವಂತಹ ಗುತ್ತಿಗೆಗಳಲ್ಲಿ ಹಾಗು ಗಣಿಗಾರಿಕೆ ಗುತ್ತಿಗೆ/ಪರವಾನಿಗೆಯನ್ನು ನೀಡಿರದ ಪ್ರದೇಶಗಳಲ್ಲಿ ಅಪ್ರಧಾನ ಖನಿಜಗಳ ಗಣಿಗಾರಿಕೆ ನಡೆಸುವಂತಹ ಈ ಘಟನೆಗಳನ್ನು ಇಲಾಖೆಯು ಗಮನಿಸಿರಲಿಲ್ಲ, ಇದು ಸಂಬಂಧಿತ ಕಚೇರಿಯ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿರುವ ಪ್ರದೇಶಗಳ ನಿಯತಕಾಲಿಕ ಪರೀಕ್ಷಣೆಗಳ ಕೊರತೆಯನ್ನು ಸೂಚಿಸುತ್ತಿದ್ದಿತು. ಮುಂದುವರೆದು, ಜಾರಿಯಲ್ಲಿರುವಂತಹ ನಿಯಮಗಳನ್ನು ಅನುಸರಿಸದೆಯೇ ಮಾಡಲಾಗಿರುವಂತಹ ಅಪ್ರಧಾನ ಖನಿಜಗಳ ಗಣಿಗಾರಿಕೆಯು ರಾಜಧನದ ಐದು ಪಟ್ಟು ದರದಲ್ಲಿ ದಂಡವನ್ನು ಹಾಗೂ ಅಲ್ಲದೆಯೇ ಖನಿಜವನ್ನು ಹೊರತೆಗೆದಿದ್ದಕ್ಕಾಗಿ ರಾಜಧನವನ್ನೂ ಆಕರ್ಷಿಸುತ್ತದೆ. ಈ ಆರು ಪ್ರಕರಣಗಳಲ್ಲಿ ಅನ್ವಯಗೊಳ್ಳುವಂತಹ ರಾಜಧನ ಮತ್ತು ದಂಡವು **ಕೋಷ್ಟಕ 4.3**ರಲ್ಲಿ ತೋರಿಸಿರುವಂತೆ ₹ 82.47 ಲಕ್ಷ ಆಗುತ್ತದೆ.

---

67 ಗಣಿಗಳು ಮತ್ತು ಖನಿಜಗಳ ಅಭಿವೃದ್ಧಿ ಮತ್ತು ನಿಯಂತ್ರಣ ಅಧಿನಿಯಮ, 1957ರ ಪರಿಚ್ಛೇದ 3(ಇ) ಅನುಸಾರ, "ಅಪ್ರಧಾನ ಖನಿಜಗಳು ಎಂದರೆ ಕಟ್ಟಡ ಕಲ್ಲುಗಳು, ಜಲ್ಲಿ, ಸಾಮಾನ್ಯ ಮಣ್ಣು, ನಿರ್ದಿಷ್ಟ ಉದ್ದೇಶಗಳಿಗೆ ಬಳಸದ ಸಾಮಾನ್ಯ ಮರಳು ಹಾಗೂ ಕೇಂದ್ರ ಸರ್ಕಾರವು ಅಧಿಕೃತ ಗೆಜೆಟ್ಟಿನಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ಒಂದು ಅಪ್ರಧಾನ ಖನಿಜ ಎಂಬುದಾಗಿ ಘೋಷಿಸಬಹುದಾದಂತಹ ಇತರೆ ಯಾವುದೇ ಖನಿಜ.

68 ಬಳ್ಳಾರಿ ಮತ್ತು ಸಿರಗುಪ್ಪ.

69 ಅವಧಿ ಮೀರಿದ ಅತ್ಯಧಿಕ ಸಂಖ್ಯೆಯ ಗಣಿಗಳುಲ್ಲ ತಾಲೂಕುಗಳನ್ನು ಆಯ್ಕೆ ಮಾಡಿ, ಅದರಲ್ಲಿ ಯಾದೃಚ್ಛಿಕ–ಆಯ್ಕೆಯ ಮೂಲಕ ಒಂದು ಸರ್ವೆ ಸಂಖ್ಯೆಯನ್ನು ಆಯ್ಕೆ ಮಾಡಲಾಯಿತು.

70 ಲೆಕ್ಕಪರಿಶೋಧನೆಯು, ಅದೇ ರೀತಿಯ ಜಂಟಿ ಪರೀಕ್ಷಣೆಗಳನ್ನು "ಅಪ್ರಧಾನ ಖನಿಜಗಳ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ವ್ಯವಸ್ಥಿತ ಮತ್ತು ವೈಜ್ಞಾನಿಕ ಗಣಿಗಾರಿಕೆ ಮತ್ತು ಪರಿಸರ ಸಂರಕ್ಷಣೆ" ಈ ವಿಷಯದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಒಂದು ಭಾಗವಾಗಿ ಇನ್ನೂ ಎಂಟು ಜಿಲ್ಲೆಗಳಲ್ಲಿ ನಡೆಸಿದ್ದಿತು ಹಾಗೂ ಗುತ್ತಿಗೆ ಅವಧಿಗಳು ಮುಕ್ತಾಯವಾಗಿದ್ದಂತಹ 53 ಗಣಿಗಳಿಂದ ಖನಿಜಗಳ ಅಕ್ರಮ/ಕಾನೂನುಬಾಹಿರ ಹೊರತೆಗೆಯುವಿಕೆಯನ್ನು ಗಮನಿಸಿದ್ದಿತು. ಈ ಪ್ರಕರಣಗಳನ್ನು 2019 ಸಾಲಿನ ವರದಿ ಸಂಖ್ಯೆ 1ರಲ್ಲಿ ಕಂಡಿಕೆ 4.4.9.4ರಲ್ಲಿ ಸೇರಿಸಲಾಗಿದೆ.

**ಕೋಷ್ಟಕ 4.3**
**ಕಟ್ಟಡ ಕಲ್ಲುಗಳ ನಿಯಮಬಾಹಿರ/ಅಕ್ರಮ ಗಣಿಗಾರಿಕೆಯ ವಿವರಗಳು**

**(₹ ಲಕ್ಷದಲ್ಲಿ)**

| ಕ್ರಮ ಸಂಖ್ಯೆ | ಅಪ್ರಧಾನ ಖನಿಜಗಳ ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿರುವವರ ಹೆಸರು/ಪ್ರದೇಶ | ಪರೀಕ್ಷಣೆಯ ದಿನಾಂಕ | ಸರ್ವೆ ಸಂಖ್ಯೆ | ವಿವರಗಳು | ಹೊರ ತೆಗೆಯಲಾದ ಪರಿಮಾಣ (ಮೆಟ್ರಿಕ್ ಟನ್ನುಗಳಲ್ಲಿ) | ವಿಧಿಸಬೇಕಿದ್ದ ರಾಜಧನ | ದಂಡ | ಒಟ್ಟು |
|---|---|---|---|---|---|---|---|---|
| 1. | ಸಿರ್ವಾರ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ | 28.12.2018 | ಸರ್ವೆ ಸಂಖ್ಯೆ 316 | ಪರವಾನಿಗೆ ಹೊಂದಿರದೆ ಹೊರ ತೆಗೆದಿದ್ದುದು | 5,755.65 | 3.45 | 17.27 | 20.72 |
| 2. | ಹಳೆಕೊಟ್ಟೆ ಗ್ರಾಮ, ಸಿರಗುಪ್ಪಾ ತಾಲ್ಲೂಕು, ಬಳ್ಳಾರಿ ಜಿಲ್ಲೆ | 28.12.2018 | ಸರ್ವೆ ಸಂಖ್ಯೆ 525 | | 365.57 | 0.22 | 1.10 | 1.32 |
| 3. | ಶ್ರೀ ಎಂ ಸಾಯಿ ಬಾಬು ಅಪ್ರಧಾನ ಖನಿಜಗಳ ಗಣಿಗಾರಿಕೆ ಪರವಾನಿಗೆ ಸಂಖ್ಯೆ 324 | 28.12.2018 | ಸರ್ವೆ ಸಂಖ್ಯೆ 528, ಹಳೇಕೋಟೆ ಗ್ರಾಮ | ಗುತ್ತಿಗೆಗಳು ಮುಕ್ತಾಯ ಗೊಂಡನಂತರ ಹೊರ ತೆಗೆದಿದ್ದುದು | 5,045.66 | 3.03 | 15.14 | 18.17 |
| 4. | ಶ್ರೀ ಶ್ರೀನಿವಾಸಲು ಅಪ್ರಧಾನ ಖನಿಜಗಳ ಗಣಿಗಾರಿಕೆ ಪರವಾನಿಗೆ ಸಂಖ್ಯೆ 345 | 28.12.2018 | ಸರ್ವೆ ಸಂಖ್ಯೆ 525, ಹಳೇಕೋಟೆ ಗ್ರಾಮ | | 3,402.56 | 2.04 | 10.21 | 12.25 |
| 5. | ಶ್ರೀ ರಾಮ ಕೊಟ್ಟೇಶ್ವರ ರಾವ್ 26.01.2014ರಿಂದ ಗುತ್ತಿಗೆ ಮುಕ್ತಾಯಗೊಂಡಿದ್ದ ಅಪ್ರಧಾನ ಖನಿಜಗಳ ಗಣಿಗಾರಿಕೆ ಪರವಾನಿಗೆ ಸಂಖ್ಯೆ 312 | 28.12.2018 | ಸರ್ವೆ ಸಂಖ್ಯೆ 354, ಹಳೇಕೋಟೆ ಗ್ರಾಮ | | 552.30 | 0.33 | 1.66 | 1.99 |

| | | | | | | | | |
|---|---|---|---|---|---|---|---|---|
| 6. | ವ್ಯಕ್ತಿಗಳ ವಿವರಗಳು ಗೊತ್ತಿರುವುದಿಲ್ಲ | 28.12.2018 | ಬಳ್ಳಾರಿ ತಾಲ್ಲೂಕಿನ ಕುರುಗೋಡು ಗ್ರಾಮದ ಸರ್ವೇ ಸಂಖ್ಯೆ 666ರಲ್ಲಿನ ಅಪ್ರಧಾನ ಖನಿಜಗಳ ಗಣಿಗಳು | ಗುತ್ತಿಗೆಯನ್ನು ರದ್ದುಗೊಳಿಸಿದ ನಂತರ ಹೊರ ತೆಗೆದಿದ್ದುದು | 7,782.20 | 4.67 | 23.35 | 28.02 |
| **ಒಟ್ಟು** | | | | | **22,903.94** | **13.74** | **68.73** | **82.47** |

ಈ ಪ್ರಕರಣಗಳನ್ನು ಫೆಬ್ರವರಿ 2019 ಹಾಗೂ ಜನವರಿ 2020ರ ನಡುವೆ ಇಲಾಖೆ ಹಾಗೂ ಸರ್ಕಾರದ ಗಮನಕ್ಕೆ ತಂದನಂತರ, ಎಲ್ಲಾ ಪ್ರಕರಣಗಳಲ್ಲಿಯೂ ನೋಟೀಸುಗಳನ್ನು ನೀಡಲಾಗಿರುವುದು ಹಾಗೂ ಮೂರು ಪ್ರಕರಣಗಳಲ್ಲಿ ₹ 32.40 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿರುವುದು (ಸೆಪ್ಟಂಬರ್ 2020).

**ಶಿಫಾರಸು : ಅಂತಹ ಅಕ್ರಮ/ಕಾನೂನುಬಾಹಿರ ಘಟನೆಗಳನ್ನು ತಡೆಯುವ ಸಲುವಾಗಿ ಅಪ್ರಧಾನ ಖನಿಜಗಳ ಗಣಿಗಳ ಪರೀಕ್ಷಣೆಗಳನ್ನು ನಡೆಸುವುದನ್ನು ತನ್ನ ವಾರ್ಷಿಕ ಯೋಜನೆಯಲ್ಲಿ ಇಲಾಖೆಯು, ಅವಧಿಯು ಮುಕ್ತಾಯಗೊಂಡಿರುವಂತಹ ಗುತ್ತಿಗೆಗಳನ್ನು ಸೇರಿಸಬೇಕು.**

**ಬೆಂಗಳೂರು** **(ಅನುಪ್ ಫ್ರಾನ್ಸಿಸ್ ಡುಂಗ್‌ಡುಂಗ್)**
**ದಿನಾಂಕ** **ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II)**
**ಕರ್ನಾಟಕ**

**ಮೇಲುಸಹಿ ಮಾಡಲಾಗಿದೆ**

**ನವ ದೆಹಲಿ** **(ಗಿರೀಶ್ ಚಂದ್ರ ಮುರ್ಮು)**
**ದಿನಾಂಕ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**